# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 261 | Pages. 2 | Date: 30-09-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 261 - ಪುಟಗಳು : 2 | 30-09-2026 | ಬುಧವಾರ | Ph: 8762954248 | ದರ : ₹1


# ಗ್ಯಾರಂಟಿ ಇಲ್ಲದಿದ್ದರೆ ಜನರ ಬದುಕು ದುಸ್ತರ

## ಸಹಕಾರ ಸಚಿವ ಲಕ್ಷ್ಮಣ್ ಸವದಿ ಪ್ರತಿಪಾದನೆ | ಬರ ನಿರ್ವಹಣೆಗೆ ಸರ್ಕಾರ ಬದ್ಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನಮ್ಮ ಸರ್ಕಾರಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಜವಾಬ್ದಾರಿ ಇದೆ. ಬಡವರು ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳು ಇಲ್ಲದಿದ್ದರೆ ಅವರ ಬದುಕು ಮತ್ತಷ್ಟು ದುಸ್ತರವಾಗುತ್ತಿತ್ತು ಎಂದು ಸಹಕಾರ ಸಚಿವ ಲಕ್ಷ್ಮಣ್ ಸವದಿ ಹೇಳಿದರು.

ತಾಲೂಕಿನ ಶ್ರವಣಬೆಳಗೊಳದಲ್ಲಿ ಮಂಗಳವಾರ ಬಾಹುಬಲಿ ನರ್ಸಿಂಗ್ ಕಾಲೇಜು ನೂತನ ಕಟ್ಟಡದ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಸಾಮಾಜಿಕ ನ್ಯಾಯದ ಆಶಯದೊಂದಿಗೆ ಜಾರಿಗೊಳಿಸಿದೆ. ಈ ಯೋಜನೆಗಳನ್ನು ಜನಸಾಮಾನ್ಯರು ಒಪ್ಪಿಕೊಂಡಿದ್ದು, ಮುಂದುವರಿಸಬೇಕು ಎಂಬ ಅಭಿಪ್ರಾಯವೂ ಜನರಲ್ಲಿದೆ ಎಂದರು.

ಅಭಿವೃದ್ಧಿ ಎಂದರೆ ಕೇವಲ ರಸ್ತೆ, ಕಟ್ಟಡ ಹಾಗೂ ಚರಂಡಿ ನಿರ್ಮಿಸುವುದಲ್ಲ. ಅದರ ಜತೆಗೆ ಸಾಮಾಜಿಕ ಅಭಿವೃದ್ಧಿಯೂ ಆಗಬೇಕು. ಸಮಾಜದ ದುರ್ಬಲ ವರ್ಗದ ಜನರ ಬದುಕಿಗೆ ಸರ್ಕಾರದ ಯೋಜನೆಗಳು ಆಸರೆಯಾಗಬೇಕು. ಈ ದೃಷ್ಟಿಯಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು ಹೇಳಿದರು.

ಕಾಂಗ್ರೆಸ್‌ನ ಕೆಲ ನಾಯಕರ ವೈಯಕ್ತಿಕ ಅಭಿಪ್ರಾಯಗಳನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯಕ್ತಪಡಿಸಲು ಅವಕಾಶವಿದೆ. ಆದರೆ, ಗ್ಯಾರಂಟಿ ಯೋಜನೆಗಳನ್ನು ಸಾಮಾಜಿಕ ನ್ಯಾಯದ ಭಾಗವಾಗಿ ಪರಿಗಣಿಸಿ ಸರ್ಕಾರ ಜಾರಿಗೊಳಿಸಿದೆ ಎಂದು ಸವದಿ ಸ್ಪಷ್ಟಪಡಿಸಿದರು.




ರಾಜ್ಯದಲ್ಲಿ ಬರ ಘೋಷಣೆಯಾಗಿದ್ದು, ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬರದ ತೀವ್ರತೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಕಳೆದ ಸುಮಾರು 50 ವರ್ಷಗಳ ಇತಿಹಾಸದಲ್ಲಿ ಈ ವರ್ಷ ಅತ್ಯಂತ ಕಡಿಮೆ ಮಳೆಯಾಗಿದೆ ಎಂದು ಸವದಿ ತಿಳಿಸಿದರು.

ಬೆಳೆಹಾನಿ, ಜಾನುವಾರುಗಳ ರಕ್ಷಣೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈಗಾಗಲೇ ಹಾನಿಯ ಸಮೀಕ್ಷೆ ಆರಂಭವಾಗಿದ್ದು, ಸಂಪೂರ್ಣ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಾಗಿ ಬರ ಪರಿಸ್ಥಿತಿ ಎದುರಿಸಬೇಕಿದೆ ಎಂದರು.

ಈಗ ರೈತರಿಗೆ ನೀಡಿರುವ 2,500 ರೂ. ಪರಿಹಾರ ತಾತ್ಕಾಲಿಕವಾಗಿದ್ದು, ಕೇಂದ್ರ ಸರ್ಕಾರಕ್ಕೂ ಪರಿಹಾರಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗುವುದು. ರಾಜ್ಯದಿಂದ ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕರೆದೊಯ್ದು ಪ್ರಧಾನಿ, ಕೃಷಿ ಸಚಿವರು ಹಾಗೂ ಗೃಹ ಸಚಿವರನ್ನು ಭೇಟಿ ಮಾಡಿ ರಾಜ್ಯದಲ್ಲಾಗಿರುವ ನಷ್ಟದ ಕುರಿತು ಮನವರಿಕೆ ಮಾಡಿ ಕೊಡಲಾಗುವುದು ಎಂದು ಹೇಳಿದರು.

### ಶೀಘ್ರ ಗ್ರಾ.ಪಂ. ಚುನಾವಣೆ

ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಆದಷ್ಟು ಬೇಗ ನಡೆಸಲು ಸರ್ಕಾರ ತೀರ್ಮಾನಿಸಿದೆ. ಮೀಸಲಾತಿ ಪ್ರಕ್ರಿಯೆ ಅಂತಿಮಗೊಳಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಕೆಲವೇ ದಿನಗಳಲ್ಲಿ ಚುನಾವಣಾ ಅಧಿಸೂಚನೆ ಹೊರಬೀಳಲಿದೆ ಎಂದು ಸಹಕಾರ ಸಚಿವ ಲಕ್ಷ್ಮಣ್ ಸವದಿ ತಿಳಿಸಿದರು.

> ರೈತರ ಸಾಲಮನ್ನಾ ಕುರಿತು ಸಾರ್ವಜನಿಕರು ಹಾಗೂ ವಿರೋಧ ಪಕ್ಷಗಳಿಂದ ಒತ್ತಾಯ ಬರುತ್ತಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರವೂ ಜವಾಬ್ದಾರಿ ವಹಿಸಬೇಕು. ಕೇಂದ್ರದ ಕ್ರಮವನ್ನು ಗಮನಿಸಿದ ಬಳಿಕ ರಾಜ್ಯ ಸರ್ಕಾರ ಮುಂದಿನ ನಿರ್ಧಾರ ಕೈಗೊಳ್ಳಲಿದೆ.
>
> **- ಲಕ್ಷ್ಮಣ್ ಸವದಿ, ಸಹಕಾರ ಸಚಿವ**

# ವಿಶೇಷ ರೈಲು ವ್ಯವಸ್ಥೆಗಾಗಿ ಸಚಿವ ಸೋಮಣ್ಣಗೆ ಸಂಸದರ ಕೋರಿಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಕ್ತಿ ದೇವತೆ ಹಾಸನಾಂಬ ಜಾತ್ರೆಗೆ ಬರುವ ಭಕ್ತರ ಅನುಕೂಲಕ್ಕಾಗಿ ವಿಶೇಷ ರೈಲು ಸಂಪರ್ಕ ವ್ಯವಸ್ಥೆ ಕಲ್ಪಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಮಾಡಿದ್ದಾರೆ.

ಅ. 29ರಿಂದ ನ. 11ರ ವರೆಗೆ ಹಾಸನಾಂಬ ಮತ್ತು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ. ಬೆಂಗಳೂರು, ಮಂಗಳೂರು ಹಾಗೂ ಮೈಸೂರಿನಿಂದ ಮತ್ತು ಹುಬ್ಬಳ್ಳಿ- ಹಾಸನ ಮಾರ್ಗಗಳಲ್ಲಿ ಅ. 28ರಿಂದ ನ. 12ರ ವರೆಗೆ ವಿಶೇಷ ರೈಲುಗಳ ಸಂಪರ್ಕ ಕಲ್ಪಿಸುವಂತೆ ಕೋರಿದ್ದಾರೆ.

ಹಾಸನ ಮಾರ್ಗವಾಗಿ ಸಂಚರಿಸುವ ನಿಯಮಿತ ರೈಲುಗಳಿಗೆ ಹೆಚ್ಚುವರಿ ಬೋಗಿಗಳನ್ನು ಜೋಡಿಸುವುದು, ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಮುಂಜಾನೆ ಮತ್ತು ತಡರಾತ್ರಿ ರೈಲು ಸೇವೆಗಳನ್ನು ಒದಗಿಸುವುದು ಹಾಗೂ ಹಾಸನ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ಟಿಕೆಟ್ ಮತ್ತು ವಿಚಾರಣಾ ಕೌಂಟರ್‌ಗಳನ್ನು ತೆರೆಯುವಂತೆಯೂ ಮನವಿ ಮಾಡಿದ್ದಾರೆ.

ನಿಲ್ದಾಣದಲ್ಲಿ ಸಾಕಷ್ಟು ಆರ್‌ಪಿಎಫ್ ಸಿಬ್ಬಂದಿ, ವೈದ್ಯಕೀಯ ನೆರವು, ಜನಸಂದಣಿ ನಿರ್ವಹಣೆ, ಕುಡಿಯುವ ನೀರು, ಸ್ವಚ್ಛತೆ ಮತ್ತು ಪ್ರಯಾಣಿಕರಿಗೆ ಅಗತ್ಯ ಸೌಲಭ್ಯ ಒದಗಿಸಬೇಕು. ರೈಲುಗಳ ಮಾರ್ಗ, ಸಮಯ ಮತ್ತು ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆಯ ಮಾಹಿತಿಯನ್ನು ಮುಂಚಿತವಾಗಿ ಪ್ರಕಟಿಸಬೇಕು ಎಂದರು.

ಪ್ರಯಾಣಿಕರ ಬೇಡಿಕೆ ಮತ್ತು ಕಾರ್ಯಾಚರಣೆಯ ಸಾಧ್ಯತೆಗಳನ್ನು ತಕ್ಷಣ ಪರಿಶೀಲಿಸಿ, ಪ್ರಸ್ತಾವನೆಯನ್ನು ನೈರುತ್ಯ ರೈಲ್ವೆ ಮುಖ್ಯ ಕಚೇರಿಗೆ ಸಲ್ಲಿಸುವಂತೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಿಗೂ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದರು.

# ಆರ್‌ಬಿಐ ಒಂಬುಡ್ಸ್‌ಮನ್: ಹಾಸನದಲ್ಲಿ ಅರಿವು ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆರ್‌ಬಿಐ ನಿಯಂತ್ರಿತ ಸಂಸ್ಥೆಗಳು ಒದಗಿಸುವ ಹಣಕಾಸು ಸೇವೆಗಳು ಗ್ರಾಹಕರು ಹಕ್ಕು ಮತ್ತು ರಕ್ಷಣೆಯ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು ಭಾರತೀಯ ರಿಸರ್ವ್ ಬ್ಯಾಂಕ್‌ನ ಪ್ರಮುಖ ಕರ್ತವ್ಯವೆಂದು ಆರ್‌ಬಿಐ ಬೆಂಗಳೂರು ಒಂಬುಡ್ಸ್‌ಮನ್ ಸೋನಾಲಿ ದಾಸ್ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ಆರ್‌ಬಿಐ-ನಿಯಂತ್ರಿತ ಸಂಸ್ಥೆಗಳ ವಿರುದ್ಧದ ಬಗೆಹರಿಯದ ಕುಂದುಕೊರತೆಗಳನ್ನು ಉಚಿತವಾಗಿ, ತ್ವರಿತವಾಗಿ ಮತ್ತು ನ್ಯಾಯಯುತವಾಗಿ ಪರಿಹರಿಸಿಕೊಳ್ಳಲು ಗ್ರಾಹಕರು ಆರ್‌ಬಿಐ ಓಂಬುಡ್ಸ್‌ಮನ್ ಅನ್ನು ಸಂಪರ್ಕಿಸಬಹುದು. ಬ್ಯಾಂಕುಗಳು




ಯಾವುದೇ ದೂರುಗಳಿಗೆ 30 ದಿನಗಳೊಳಗೆ ಪ್ರತಿಕ್ರಿಯಿಸಬೇಕು. ತಮ್ಮ ವೆಬ್‌ಸೈಟ್ ಮತ್ತು ಶಾಖೆಗಳ ಮೂಲಕ ದೂರುಗಳನ್ನು ದಾಖಲಿಸಲು ಅನುಕೂಲಕರ ಮಾರ್ಗಗಳನ್ನು ಒದಗಿಸಬೇಕೆಂದರು.

ವಿವಿಧ ಡಿಜಿಟಲ್ ಬ್ಯಾಂಕಿಂಗ್ ಮತ್ತು ಸೈಬರ್ ವಂಚನೆಗಳ ಕಾರ್ಯವಿಧಾನ, ಡಿಜಿಟಲ್ ವಹಿವಾಟು ನಡೆಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ, ಪಾಸ್‌ವರ್ಡ್ ಮತ್ತು ಲಾಗಿನ್ ವಿವರಗಳ ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಪ್ರಾಮುಖ್ಯತೆ, ವಂಚನೆಯ ವಹಿವಾಟುಗಳಲ್ಲಿ ಗ್ರಾಹಕರ ಹೊಣೆಗಾರಿಕೆಗೆ ಸಂಬಂಧಿಸಿದ ನಿಯಮಗಳ ಬಗ್ಗೆ ಅರಿವು ಮೂಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ಆರ್‌ಬಿಐ ಉಪಓಂಬುಡ್ಸ್‌ಮನ್ ರಾವ್ ಗೋವಿಂದ್ ಬಡೆ ಮಾತನಾಡಿ, ಆರ್‌ಬಿಐ ಪೋರ್ಟಲ್ ಮತ್ತು ಲಭ್ಯವಿರುವ ಇತರ ಮಾರ್ಗಗಳ ಮೂಲಕ ದೂರುಗಳನ್ನು ಹೇಗೆ ಸಲ್ಲಿಸಬಹುದು ಎಂಬುದನ್ನು ವಿವರಿಸಿದರು.

ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಡಿಜಿಟಲೀಕರಣಗೊಳಿಸಲಾಗಿದ್ದು, ಗ್ರಾಹಕರು ನೇರವಾಗಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿದೆ. ಡಿಜಿಟಲ್ ವಹಿವಾಟುಗಳು ಸುರಕ್ಷಿತವಾಗಿವೆ ಎಂಬ ವಿಶ್ವಾಸವನ್ನು ಗ್ರಾಹಕರಲ್ಲಿ ಮೂಡಿಸಲು ಓಂಬುಡ್ಸ್ ಮನ್ ಕಚೇರಿಯು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಗ್ರಾಹಕರ ಪ್ರತಿಯೊಂದು ರೂಪಾಯಿಯನ್ನು ಸುರಕ್ಷಿತವಾಗಿಡುವುದು ಬ್ಯಾಂಕಿಂಗ್‌ನ ಮುಖ್ಯ ಉದ್ದೇಶವಾಗಿದೆ. ಗ್ರಾಹಕರು ಜಾಗೃತರಾಗಿ ಮತ್ತು ಎಚ್ಚರದಿಂದಿದ್ದಾಗ ಬ್ಯಾಂಕಿಂಗ್ ಸುಲಭ ಮತ್ತು ಸುರಕ್ಷಿತವಾಗುತ್ತದೆಂದರು.

ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರ ಬ್ಯಾಂಕ್‌ಗಳ ಹಿರಿಯ ಉಪಸ್ಥಿತರಿದ್ದರು.

1250ಕ್ಕೂ ಹೆಚ್ಚು ಗ್ರಾಹಕರು, ಕಾಲೇಜು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಹೃದಯಾಘಾತ: ನಿರ್ಲಕ್ಷ್ಯ ಬೇಡವೆಂದ ವೈದ್ಯರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇತ್ತೀಚಿನ ದಿನಗಳಲ್ಲಿ ಸಣ್ಣವಯಸ್ಸಿನ ಮಕ್ಕಳು ಹಾಗೂ 25 ರಿಂದ 30 ವರ್ಷದ ಯುವಕರಲ್ಲಿ ಹೃದಯಾಘಾತ ಕಾಣಿಸಿಕೊಳ್ಳುತ್ತಿದ್ದು ನಿಯಮಿತವಾಗಿ ಆರೋಗ್ಯ ತಪಾಸಣೆ ಮತ್ತು ಜೀವನ ಶೈಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ಇಂಡಿಯಾನಾ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ಅನೂಪ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ವಿಶ್ವ ಹೃದಯ ದಿನದ ಅಂಗವಾಗಿ ಸಾರ್ವಜನಿಕರಲ್ಲಿ ಹೃದಯದ ಆರೋಗ್ಯದ ಕುರಿತು ಜಾಗೃತಿ ಮೂಡಿಸಲು ಸೆ. 29 ರಿಂದ ಅ. 2ರ ವರೆಗೆ ಕೇವಲ 999 ರೂ. ಗೆ ಹೃದಯ ತಪಾಸಣೆ ಮತ್ತು ಅ.2ರ ಗಾಂಧಿ ಜಯಂತಿ ದಿನ 18 ವರ್ಷದೊಳಗಿನ ಮಕ್ಕಳಿಗೆ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.




ಹೃದಯದ ಬಡಿತ ಹಾಗೂ ರಿದಮ್ ವೈಪರೀತ್ಯಗಳ ಕುರಿತು ಅರಿವು ಮೂಡಿಸಲು ಡೋಂಟ್ ಮಿಸ್ ಎ ಬೀಟ್ ಘೋಷವಾಕ್ಯದಡಿ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಧೂಮಪಾನ, ಮದ್ಯಪಾನ, ಮಾನಸಿಕ ಒತ್ತಡ ಹಾಗೂ ಬದಲಾದ ಜೀವನ ಶೈಲಿಯಿಂದಾಗಿ ಹೃದಯಾಘಾತ ಮತ್ತು ಹೃದಯ ಬಡಿತದಲ್ಲಿ ಏರುಪೇರಾಗುವ ಸಮಸ್ಯೆಗಳು ಹೆಚ್ಚಾಗುತ್ತಿದೆ. ಅದಕ್ಕೆ ವಂಶಪಾರಂಪರ್ಯ, ಜ್ವರದ ಬಳಿಕ ಸಂಭವಿಸುವ ಅನಾರೋಗ್ಯ ಹಾಗು ಜೀವನ ಶೈಲಿ ಕಾರಣವಾಗಿರಬಹುದು.ಯಾರೂ ಆರೋಗ್ಯದ ಕುರಿತು ನಿರ್ಲಕ್ಷ್ಯ ಹೊಂದಬಾರದು ಎಂದರು.

ಅತ್ಯಂತ ಕಡಿಮೆ ದರದಲ್ಲಿ ಈಸಿಜಿ, ಎಕೋ, ಟಿಎಂಟಿ ಮಾಡಲಾಗುತ್ತದೆ. ಇದಕ್ಕೆ ಕೇವಲ 999 ರೂ. ಶುಲ್ಕ ನಿಗದಿಪಡಿಸಲಾಗಿದೆ. ಇದು ನಾಲ್ಕು ದಿನಗಳಿಗೆ ಸೀಮಿತ ಪರೀಕ್ಷೆ. ಉಳಿದಂತೆ 2500 ರೂ. ಪಾವತಿಸಿದರೆ ರಕ್ತದೊತ್ತಡ, ಮಧುಮೇಹ, ಕೊಲೆಸ್ಟ್ರಾಲ್ ಹಾಗು ಕಿಡ್ನಿ ಕಾರ್ಯಕ್ಷಮತೆ ಜೊತೆಗೆ ಹೃದಯ ತಪಾಸಣೆ ಮಾಡಲಾಗುವುದು ಎಂದರು.

ಆಸ್ಪತ್ರೆಯಿಂದ ಗುಣಮುಖರಾಗಿ ಡಿಸ್ಚಾರ್ಜ್ ಆಗುವ ಪ್ರತಿಯೊಬ್ಬ ಹೃದಯ ರೋಗಿಗೂ ಮಲೆನಾಡಿನ ಸಾಂಪ್ರದಾಯಿಕ ಗಿಡದ ಸಸಿಯನ್ನು ಕೊಡುಗೆಯಾಗಿ ನೀಡಲಾಗುತ್ತದೆ. ರೋಗಿಗಳು ಅದನ್ನು ನೆಟ್ಟು ಪೋಷಿಸುವ ಮೂಲಕ ಸಾಮಾಜಿಕ ಜವಾಬ್ದಾರಿ ವಹಿಸಿಕೊಳ್ಳಬೇಕು. ಹೀಗೆ ಸಸಿಯನ್ನು ಪೋಷಿಸಿ ಬೆಳೆಸಿದವರಿಗೆ ಮುಂದಿನ ತಪಾಸಣೆಯ ವೇಳೆ 3 ಸಾವಿರ ರೂ. ವರೆಗೆ ರಿಯಾಯಿತಿ ನೀಡಲಾಗುವುದು ಎಂದು ತಿಳಿಸಿದರು.

ಹೃದಯ ತಜ್ಞ ಡಾ. ನಿರೂಪ್, ಆಸ್ಪತ್ರೆ ಆಡಳಿತಾಧಿಕಾರಿ ಪ್ರದೀಪ್ ಹಾಜರಿದ್ದರು.

# ಸಕಲೇಶಪುರದಲ್ಲಿ ಖತರ್ನಾಕ್ ಕಳ್ಳರ ಬಂಧಿಸಿದ ಪೊಲೀಸರು




ಸಕಲೇಶಪುರ: ಕಾಫಿ ತೋಟದ ಕಾರ್ಮಿಕರ ಸೋಗಿನಲ್ಲಿ ವಾಸ್ತವ್ಯ ಹೂಡಿ ಮಹಿಳೆಯರ ಸರಗಳ್ಳತನದಲ್ಲಿ ನಿರತರಾಗಿದ್ದ ಅಂತರ ರಾಜ್ಯದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಅಸ್ಸಾಂ ಮೂಲದ ರಾಕಿ ಬುಲ್ ಹುಸೇನ್ ಹಾಗೂ ಗಾಜಿಬುರ್ ರೆಹಮಾನ್ ಬಂಧಿತರು. ಬೇಲೂರು ತಾಲ್ಲೂಕಿನ ಅರೇಹಳ್ಳಿಯಲ್ಲಿ ವಾಸ್ತವ್ಯ ಹೂಡಿದ್ದರು ಎನ್ನಲಾಗಿದೆ.

ಕೆಲವು ದಿನಗಳ ಹಿಂದೆ ಪಟ್ಟಣದ ಹೊಳೆಮಲ್ಲೇಶ್ವರ ದೇವಸ್ಥಾನದ ಸಮೀಪ ಬ್ರಾಹ್ಮಣರ ಬೀದಿ ನಿವಾಸಿ, ನಿವೃತ್ತ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಶಾಂತಪ್ಪ ಅವರ ಪತ್ನಿ ರಾಣಿಯಮ್ಮ ಅವರು ತೆರಳುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಖದೀಮರು ಏಕಾಏಕಿ ಕೊರಳಿನಲ್ಲಿದ್ದ ಸುಮಾರು 45 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಘಟನೆ ಪಟ್ಟಣದಲ್ಲಿ ತೀವ್ರ ಆತಂಕ ಸೃಷ್ಟಿಸಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಹಳೆಯ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಶಂಕಿತರ ಚಲನವಲನದ ಮೇಲೆ ಕಣ್ಣಿಟ್ಟು ವಿಶೇಷ ಜಾಲ ರೂಪಿಸಿದ್ದರು.

ಆರೋಪಿಗಳು ಮಂಗಳವಾರ ಮುಂಜಾನೆ ಮತ್ತೆ ಸಕಲೇಶಪುರ ಪಟ್ಟಣ ಪ್ರವೇಶಿಸುತ್ತಿರುವ ಬಗ್ಗೆ ಆಧುನಿಕ ತಂತ್ರಜ್ಞಾನ ಹಾಗು ನೆಟ್‌ವರ್ಕ್‌ನ ಸಹಾಯದಿಂದ ಪೊಲೀಸರಿಗೆ ಖಚಿತ ಸುಳಿವು ಲಭ್ಯವಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು ಪಟ್ಟಣದ ಪ್ರಮುಖ ಪ್ರವೇಶ ದ್ವಾರಗಳಲ್ಲಿ ನಾಕಾಬಂದಿ ಹಾಕಿ ಹೊಂಚುಹಾಕಿ ಕುಳಿತಿದ್ದರು. ಬೆಳಿಗ್ಗೆ ಸುಮಾರು 6 ಗಂಟೆಗೆ ಹೇಮಾವತಿ ಸೇತುವೆ ಮೂಲಕ ಆರೋಪಿಗಳು ಪಟ್ಟಣ ಪ್ರವೇಶಿಸುತ್ತಿದ್ದಂತೆ ಸಿವಿಲ್ ಉಡುಪಿನಲ್ಲಿದ್ದ ಪೊಲೀಸರು ಖಾಸಗಿ ವಾಹನದಲ್ಲಿ ಅವರನ್ನು ಬೆನ್ನಟ್ಟಿದ್ದಾರೆ.

ಹಳೆ ಬಸ್ ನಿಲ್ದಾಣದ ಸಮೀಪ ಪೊಲೀಸರನ್ನು ಕಂಡು ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿಗಳು, ತಮ್ಮ ಬೈಕ್ ಅನ್ನು ಪೊಲೀಸರ ವಾಹನಕ್ಕೆ ಡಿಕ್ಕಿ ಹೊಡೆಸಿದ್ದಾರೆ. ಡಿಕ್ಕಿಯ ರಭಸಕ್ಕೆ ಓರ್ವ ಆರೋಪಿ ಗಾಯಗೊಂಡು ರಸ್ತೆಗೆ ಬಿದ್ದಿದ್ದು, ಆತನನ್ನು ಪೊಲೀಸರು ತಕ್ಷಣವೇ ವಶಕ್ಕೆ ಪಡೆದರು. ಮತ್ತೊಬ್ಬ ಆರೋಪಿ ಕತ್ತಲಿನಲ್ಲಿ ಅಲ್ಲಿಂದ ಕಾಲ್ಕಿತ್ತಿದ್ದ.

ಪರಾರಿಯಾಗಿದ್ದ ಆರೋಪಿ ಪೊಲೀಸರ ಕಣ್ಣಿಗೆ ಮಣ್ಣೆರಚಲು ತಕ್ಷಣವೇ ಬಟ್ಟೆ ಬದಲಾಯಿಸಿಕೊಂಡು, ಘಟನಾ ಸ್ಥಳಕ್ಕೆ ಮರಳಿ ಏನೂ ಅರಿಯದವನಂತೆ ಸಾರ್ವಜನಿಕರ ಮಧ್ಯೆ ನಿಂತು ತಮಾಷೆ ನೋಡುವ ನಾಟಕವಾಡಿದ್ದಾನೆ. ಆದರೆ, ಸರ್ಕಲ್ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಆತನ ಸಂಶಯಾಸ್ಪದ ನಡವಳಿಕೆಯನ್ನು ಕ್ಷಣಾರ್ಧದಲ್ಲಿ ಗುರುತಿಸಿ ತಪ್ಪಿಸಿಕೊಳ್ಳಲು ಅವಕಾಶ ನೀಡದೆ ಸಾರ್ವಜನಿಕರ ಎದುರೇ ಹೆಡೆಮುರಿ ಕಟ್ಟಿದ್ದಾರೆ.

# ಲೌಕಿಕ ಆಸೆಗಾಗಿ ಸಂಬಂಧ ಹದಗೆಡಬಾರದು: ಶ್ರವಣಬೆಳಗೊಳ ಶ್ರೀ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಭಗವಾನ್ ಬಾಹುಬಲಿ ಸ್ವಾಮಿಯೂ ಕೂಡ ಕ್ರೀಡಾಪಟುವಾಗಿದ್ದರು. ಭರತ-ಬಾಹುಬಲಿ ನಡುವಿನ ಯುದ್ಧದ ಸಂದರ್ಭದಲ್ಲಿ ಸೈನಿಕರ ಪ್ರಾಣ ಹಾನಿಯಾಗಬಾರದು ಎಂಬ ಉದ್ದೇಶದಿಂದ ಜಲಯುದ್ಧ, ದೃಷ್ಟಿಯುದ್ಧ ಹಾಗೂ ಮಲ್ಲಯುದ್ಧಗಳ ಮೂಲಕ ಸ್ಪರ್ಧೆ ನಡೆಸಲಾಯಿತು. ಇಂದಿನ ಸಮಾಜವೂ ಕೇವಲ ಲೌಕಿಕ ಆಸೆ-ಆಕಾಂಕ್ಷೆಗಳಿಗಾಗಿ ಅಣ್ಣ-ತಮ್ಮಂದಿರು ಹಾಗೂ ಸಂಬಂಧಗಳನ್ನು ಮರೆಯಬಾರದು ಎಂದು ಶ್ರವಣಬೆಳಗೊಳ ಜೈನ ಮಠದ ಪೀಠಾಧ್ಯಕ್ಷ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಹೇಳಿದರು.

ಶ್ರವಣಬೆಳಗೊಳದ ಬಾಹುಬಲಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಆಶೀರ್ವಚನ ನೀಡಿದ ಅವರು, ಭರತಬಾಹುಬಲಿ ಕಥೆಯಲ್ಲಿರುವ ಕ್ರೀಡಾ ಮನೋಭಾವ ಇಂದಿನ ಯುವಜನತೆಗೆ ಆದರ್ಶವಾಗಬೇಕು. ಕ್ರೀಡೆಯಲ್ಲಿ ಗೆಲುವು ಸೋಲು ಸಹಜ. ಆದರೆ ಸ್ಪರ್ಧೆಗಿಂತ ಪರಸ್ಪರ ಗೌರವ, ಸಹೋದರತ್ವ ಮತ್ತು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳು ಉತ್ತಮ ಶಿಕ್ಷಣದ ಜತೆಗೆ ಕ್ರೀಡೆಗೂ ಸಮಾನ ಮಹತ್ವ ನೀಡಬೇಕು ಎಂದು ಸಲಹೆ ನೀಡಿದರು.




ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕ್ರೀಡೆಯಿಂದ ವಂಚಿತರಾಗಬಾರದು. ವಿದ್ಯಾರ್ಥಿಗಳು ದೇಶದ ಭವಿಷ್ಯದ ಆಸ್ತಿಗಳಾಗಿದ್ದು, ಪ್ರತಿನಿತ್ಯ ಕನಿಷ್ಠ ಒಂದು ಗಂಟೆಯನ್ನು ವ್ಯಾಯಾಮ ಹಾಗೂ ದೈಹಿಕ ಚಟುವಟಿಕೆಗಳಿಗೆ ಮೀಸಲಿಡಬೇಕು ಎಂದರು.

ಕ್ರೀಡೆಯಲ್ಲಿ ಸೋಲುಗೆಲುವನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಕ್ರೀಡೆಯು ಕೇವಲ ದೈಹಿಕ ಸದೃಢತೆ ನೀಡುವುದಲ್ಲದೆ ಮಾನಸಿಕ ಶಕ್ತಿ, ಆತ್ಮವಿಶ್ವಾಸ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುತ್ತದೆ ಎಂದು ಹೇಳಿದರು.

ತಾಲೂಕು ಮಟ್ಟದ ಕ್ರೀಡಾಕೂಟಗಳನ್ನು ನಡೆಸಲು ಸರ್ಕಾರದಿಂದ ಯಾವುದೇ ಅನುದಾನ ದೊರೆಯುತ್ತಿಲ್ಲ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿರುವ ಕ್ರೀಡಾ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಅಗತ್ಯ ವೇದಿಕೆ ಹಾಗೂ ಮೂಲಸೌಕರ್ಯ ಕಲ್ಪಿಸಲು ಸರ್ಕಾರ ವಿಶೇಷ ಅನುದಾನ ನೀಡಬೇಕು ಎಂದು ಶಾಸಕ ಬಾಲಕೃಷ್ಣ ಒತ್ತಾಯಿಸಿದರು.

ಶ್ರವಣಬೆಳಗೊಳದಲ್ಲಿ ರಾಜ್ಯಮಟ್ಟದ ಸ್ಕೌಟ್ ಅಂಡ್ ಗೈಡ್ಸ್ ಕಾರ್ಯಾಗಾರ ನಡೆಸಲು ಯೋಜನೆ ರೂಪಿಸಲಾಗಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ಸೇವಾ ಮನೋಭಾವ, ನಾಯಕತ್ವ ಗುಣ ಹಾಗೂ ದೇಶಪ್ರೇಮ ಬೆಳೆಸುವಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು ಎಂದು ಅವರು ತಿಳಿಸಿದರು.

ಶ್ರೀಕ್ಷೇತ್ರದ ಅಭಿವೃದ್ಧಿ ಹಾಗೂ ಮುಂಬರುವ ಮಹಾಮಸ್ತಕಾಭಿಷೇಕದ ಪೂರ್ವಸಿದ್ಧತೆ ಹಿನ್ನೆಲೆಯಲ್ಲಿ ಪೂಜ್ಯ ಸ್ವಾಮೀಜಿಯವರ ಮಾರ್ಗದರ್ಶನದಂತೆ ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವು ಕೇಂದ್ರ ಸಚಿವರನ್ನು ಭೇಟಿ ಮಾಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮನವಿ ಸಲ್ಲಿಸಲಾಗಿದೆ.

ಶ್ರೀಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಲಾಗಿದೆ ಎಂದರು.

ಸಹಕಾರ ಸಚಿವ ಲಕ್ಷ್ಮಣ್ ಸವದಿ, ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘದ ರಾಜ್ಯ ಉಪಾಧ್ಯಕ್ಷ ಎಚ್.ಬಿ.ಮದನಗೌಡ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎನ್.ಲೋಕೇಶ್ ಹಡೆನಹಳ್ಳಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಅಫ್ತಾಫ್ ಪಾಷ, ಪರಮ ದೇವರಾಜ್, ಜಿಲ್ಲಾ ಕ್ರೀಡಾ ಸಮನ್ವಯಾಧಿಕಾರಿ ಚಿಕ್ಕೇಗೌಡ, ಪ್ರಾಂಶುಪಾಲ ಡಾ. ಎಸ್.ದಿನೇಶ್, ಡಾ.ಸುನಿಲ್ ಕುಮಾರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಟಿ.ಮಹೇಶ್, ಜೀವನ್, ಕಿರಣ್ ಕುಮಾರ್, ಕರ್ನಾಟಕ ರಕ್ಷಣಾ ವೇದಿಕೆ ಮುಖಂಡ ಗಣೇಶಗೌಡ ಉಪಸ್ಥಿತರಿದ್ದರು.

# ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತ ಸಂಘದಿಂದ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತೀವ್ರ ಬರಗಾಲದಿಂದ ಸಂಕಷ್ಟಕ್ಕೀಡಾಗಿರುವ ರೈತರ ಸಂಪೂರ್ಣ ಕೃಷಿ ಸಾಲ ಮನ್ನಾ ಮಾಡಬೇಕು ಹಾಗೂ ಪಂಪ್‌ಸೆಟ್ ಗಳಿಗೆ ಸಮರ್ಪಕ ವಿದ್ಯುತ್ ಪೂರೈಸಬೇಕೆಂದು ಆಗ್ರಹಿಸಿ ರಾಜ್ಯ ರೈತ ಸಂಘ ಜಿಲ್ಲಾ ಘಟಕದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.



ರೈತ ಸಂಘದ ಜಿಲ್ಲಾಧ್ಯಕ್ಷ ಹೆಚ್.ಕೆ.ರಘು ಮಾತನಾಡಿ, ಬರದಿಂದ ಕೆರೆ-ಕಟ್ಟೆಗಳು ಹಾಗು ಜಲಮೂಲಗಳು ಬತ್ತಿದ್ದು ಬೆಳೆಗಳು ಹಾನಿಗೀಡಾಗಿವೆ. ಅಂತರ್ಜಲ ಕುಸಿತದಿಂದ ಅಡಿಕೆ, ತೆಂಗು ಸೇರಿ ತೋಟಗಾರಿಕಾ ಬೆಳೆಗಳಿಗೂ ಹಾನಿಯಾಗಿದೆ. ನೀರು ಮತ್ತು ಮೇವಿನ ಕೊರತೆಯಿಂದ ಜಾನುವಾರು ಸಾಕಾಣಿಕೆ ಕಷ್ಟವಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆಂದರು.

ಕೃಷಿ ಪಂಪ್‌ಸೆಟ್‌ಗಳಿಗೆ ಕನಿಷ್ಟ ಏಳು ಗಂಟೆ ವಿದ್ಯುತ್ ಪೂರೈಸಬೇಕು. ಬೆಳೆ ವಿಮೆ ಹಾಗೂ ರಾಗಿ ಖರೀದಿ ಬಾಕಿ ಹಣವನ್ನು ತಕ್ಷಣ ಪಾವತಿಸಬೇಕು. ಬೆಳೆನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡಬೇಕು. ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಮಾಡಿ, ಸಾಲ ವಸೂಲಾತಿಗೆ ತಡೆ ನೀಡಬೇಕೆಂದರು. ಹೇಮಾವತಿ ನಾಲಾ ವ್ಯಾಪ್ತಿಯ ಕೆರೆ-ಕಟ್ಟೆಗಳನ್ನು ತುಂಬಿಸಬೇಕು, ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಹಾಗು ಮೇವು ಒದಗಿಸಬೇಕು. ಬರಗಾಲದ ಸಂದರ್ಭದಲ್ಲಿ ಗುಳೆ ಹೋಗುತ್ತಿರುವ ಕೃಷಿಕರು ಮತ್ತು ಕೃಷಿ ಕಾರ್ಮಿಕರಿಗೆ ಸ್ಥಳೀಯವಾಗಿ ಉದ್ಯೋಗ ಕಲ್ಪಿಸಬೇಕು. ಹಾಲಿಗೆ ಲೀಟರ್ ಗೆ ಕನಿಷ್ಟ 60 ರೂ. ದರ ನಿಗದಿಪಡಿಸಿ, ಪಶು ಆಹಾರವನ್ನು ರಿಯಾಯಿತಿ ದರದಲ್ಲಿ ನೀಡಬೇಕೆಂದು ಆಗ್ರಹಿಸಿದರು.

ಹೇಮಾವತಿ, ಎತ್ತಿನಹೊಳೆ, ರೈಲ್ವೆ ಸೇರಿ ವಿವಿಧ ಯೋಜನೆಗಳಿಗೆ ಭೂಮಿ ಕಳೆದುಕೊಂಡ ರೈತರಿಗೆ ಬಾಕಿ ಪರಿಹಾರವನ್ನು ತುರ್ತಾಗಿ ಪಾವತಿಸಬೇಕು. ಬಗರ್ ಹುಕುಂ ಸಮಿತಿಯ ಮುಂದೆ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡಿ ಮಂಜೂರಾದ ಜಮೀನುಗಳಿಗೆ ಖಾತೆ ಮಾಡಿಕೊಡಬೇಕು. ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ವಿದ್ಯುತ್ ಪರಿವರ್ತಕ ಅಳವಡಿಸಲು ಸೆಸ್ಕಾಂ ಅಧಿಕಾರಿಗಳು ಲಂಚ ಕೇಳುತ್ತಾರೆ. ಹಣ ಕೊಡದಿದ್ದರೆ ಸಂಪರ್ಕ ಕಲ್ಪಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಲ್.ಹರೀಶ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಕಾಮಾಕ್ಷಿ, ಕಾರ್ಯದರ್ಶಿ ಮಂಜುಳಾ, ಪ್ರಧಾನ ಕಾರ್ಯದರ್ಶಿ ನರಸಿಂಹಶೆಟ್ಟಿ, ಉಪಾಧ್ಯಕ್ಷ ಯತೀಂದ್ರ, ಟಿ.ಎಂ. ಮೂಡ್ಲಗಿರಿಗೌಡ, ತಾಲೂಕು ಅಧ್ಯಕ್ಷ ಯು.ಎಲ್. ಶಾಂತರಾಜು ಅರಸು, ಶ್ರೀಧರ್ ಹಾಗೂ ರೈತರು ಭಾಗವಹಿಸಿದ್ದರು.

# ಪೌರ ಕಾರ್ಮಿಕರು ದೇವರಿದ್ದಂತೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಪೌರ ಕಾರ್ಮಿಕರ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸಲು ಶ್ರಮಿಸುತ್ತೇನೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ಏರ್ಪಡಿಸಿದ್ದ ಪೌರ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪೌರ ಕಾರ್ಮಿಕರು ಸಮಾಜದ ಸ್ವಚ್ಚತೆ ಕಾಪಾಡುವ ಉದ್ದೇಶದಿಂದ ತಮ್ಮ ವೃತ್ತಿಯಲ್ಲಿ ಘನತೆ ಮೆರೆದಿದ್ದಾರೆ. ನಾವು ಪ್ರತಿದಿನ ಬೆಳಗ್ಗೆ ಎದ್ದಾಗ ದೇವರನ್ನು ನೆನೆಯುತ್ತೇವೆ. ಆದರೆ ಆ ದೇವರು ಪೌರ ಕಾರ್ಮಿಕರಾಗಿರುವರು. ಇವರು ಎರಡು ದಿನ ಕೆಲಸ ಮಾಡದಿದ್ದರೆ ಮುಂದಾಗುವುದನ್ನು ಊಹಿಸಲು ಸಾಧ್ಯವಾಗುವುದಿಲ್ಲ ಎಂದರು.

ಮುಖ್ಯಾಧಿಕಾರಿ ಮಂಜುನಾಥ್ ಮಾತನಾಡಿ, ಪೌರ ಕಾರ್ಮಿಕರನ್ನು ಪ್ರತಿಯೊಬ್ಬರೂ ಸದಾ ಗೌರವಿಸಬೇಕು. ಪೌರ ಕಾರ್ಮಿಕರು ಪಟ್ಟಣದ ಜನರ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಪೌರ ಕಾರ್ಮಿಕರನ್ನು ಹೊಗಳುವುದಕ್ಕಿಂತ ಅವರ ಪರ ಧ್ವನಿ ಎತ್ತುವ ಕೆಲಸವಾಗಬೇಕಾಗಿದೆ. ಪೌರ ಕಾರ್ಮಿಕರು ಸದಾ ರಕ್ಷಣಾ ಪರಿಕರಗಳನ್ನು ಧರಿಸಿ ಕೆಲಸ ಮಾಡಬೇಕು. ಪೌರ ಕಾರ್ಮಿಕರ ನಿಷ್ಠೆ ಸಮಾಜದ ಸ್ವಚ್ಛತೆ ಕಾಪಾಡುತ್ತದೆ ಎಂದರು.

ಸಮಾರಂಭದಲ್ಲಿ ಪೌರ ಕಾರ್ಮಿಕರಾದ ಲೋಕೇಶ, ಪುರುಷೋತ್ತಮ, ಸುಬ್ಬಮ್ಮ, ನಾಗರತ್ನ, ಸುನಿತಾ, ಲಕ್ಷ್ಮಣ್, ಪಾಲಾಕ್ಷ, ಶಶಿಕುಮಾರ, ಕೃಷ್ಣೇಗೌಡ, ಮಂಜುನಾಥ್, ಆಧಾಶ್, ಭರತ್, ಇಂದ್ರೇಶ್, ಸಿದ್ದಗಂಗಮ್ಮ, ಪುಟ್ಟಲಕ್ಷ್ಮಿ, ಮಂಜುಳ, ಶಿವನ್ನ, ಶಂಕರ್, ಮಣಿ, ಪ್ರಜ್ವಲ್, ಕಿರಣ್, ಅನುಕುಮಾರ್, ರಾಜಶೇಖರ್, ಷಣ್ಮುಗ, ಪ್ರತಾಪ್ ಅವರನ್ನು ಸನ್ಮಾನಿಸಲಾಯಿತು. ಶಾಸಕರು ಪೌರ ಕಾರ್ಮಿಕರೊಂದಿಗೆ ಮಧ್ಯಾಹ್ನದ ಭೋಜನ ಸವಿದರು. ಕಂದಾಯ ಅಧಿಕಾರಿ ಪೃಥ್ವಿ ಉಪಸ್ಥಿತರಿದ್ದರು.

# ಕಿತ್ತಾವರದಲ್ಲಿ ಗಣೇಶ ವಿಸರ್ಜನೆ ಸಂಪನ್ನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಅನುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಿತ್ತಾವರ ಗ್ರಾಮದಲ್ಲಿ ಎರಡು ವಾರಗಳ ಕಾಲ ಸಂಭ್ರಮದಿಂದ ನಡೆದ ಗಣೇಶೋತ್ಸವ ಸಂಪನ್ನಗೊಂಡಿತು.

ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಮನೋರಂಜನಾ ಕಾರ್ಯಕ್ರಮಗಳೊಂದಿಗೆ ಗಣೇಶ ಮೂರ್ತಿ ವಿಸರ್ಜಿಸಲಾಯಿತು. ಗಣೇಶ ಮೂರ್ತಿ ಪ್ರತಿಷ್ಠಾಪನೆಯ ದಿನದಿಂದಲೇ ಪ್ರತಿದಿನ ಭಕ್ತಾದಿಗಳಿಗೆ ಅನ್ನದಾಸೋಹ ಏರ್ಪಡಿಸಲಾಗಿತ್ತು. ಅದರೊಂದಿಗೆ ಮಕ್ಕಳು, ಮಹಿಳೆಯರು ಹಾಗೂ ಪುರುಷರಿಗೆ ವಿವಿಧ ಮನೋರಂಜನಾತ್ಮಕ ಆಟೋಟ ಸ್ಪರ್ಧೆ ಆಯೋಜಿಸಲಾಗಿತ್ತು. ಗ್ರಾಮಸ್ಥರು ಹಾಗೂ ಸುತ್ತಲಿನ ಗ್ರಾಮಗಳ ಭಕ್ತರು ಉತ್ಸಾಹದಿಂದ ಪಾಲ್ಗೊಂಡಿದ್ದರು.

ವಿಸರ್ಜನೆಯ ಹಿಂದಿನ ದಿನ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಬಳಿಕ ಮಕ್ಕಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಇದೇ ಸಂದರ್ಭದಲ್ಲಿ ಬೇಲೂರು ಕೃಷ್ಣಮೂರ್ತಿ ರಚಿಸಿರುವ ತ್ಯಾಗಿ ಸಾಮಾಜಿಕ ನಾಟಕ ಪ್ರದರ್ಶನಗೊಂಡಿತು.

ನಾಟಕದ ಹಾಸ್ಯಮಯ ಸನ್ನಿವೇಶಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರೆ, ಭಾವನಾತ್ಮಕ ದೃಶ್ಯಗಳು ಪ್ರೇಕ್ಷಕರ ಮನಸೂರೆಗೊಂಡವು. ಹಲವು ಸನ್ನಿವೇಶಗಳಲ್ಲಿ ಪ್ರೇಕ್ಷಕರು ಭಾವುಕರಾಗಿ ಕಣ್ಣೀರಿಟ್ಟರು. ನಾಟಕವು ಪ್ರೇಕ್ಷಕರಿಂದ ಮೆಚ್ಚುಗೆ ಪಡೆಯಿತು. ಬಳಿಕ ಅಲಂಕೃತ ವಾಹನದಲ್ಲಿ ಗಣೇಶ ಮೂರ್ತಿಯನ್ನು ಕೂರಿಸಿ ಭವ್ಯ ಮೆರವಣಿಗೆ ನಡೆಸಲಾಯಿತು. ದೋಲನಮನೆ ಹಾಗು ಕಿತ್ತಾವರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆಯಲ್ಲಿ ಭಕ್ತರು ಸಂಭ್ರಮದಿಂದ ಪಾಲ್ಗೊಂಡರು. ಗಣಪತಿ ವಿಸರ್ಜನೆ ಹಿನ್ನಲೆ ಸಾಗಿದ ಮೆರವಣಿಗೆ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಿಸಿತು.

ನಂತರ ಜೈಭೀಮ್ ನಗರಕ್ಕೆ ತೆರಳುವ ಮಾರ್ಗದಲ್ಲಿರುವ ಕಲ್ಕೆರೆಯಲ್ಲಿ ಗಣೇಶ ಮೂರ್ತಿಯ ವಿಸರ್ಜನೆ ನೆರವೇರಿಸಲಾಯಿತು.

# ನಿವೇಶನಕ್ಕಾಗಿ ಕೆಪಿಆರ್‌ಎಸ್ ನೇತೃತ್ವದಲ್ಲಿ ಪಾದಯಾತ್ರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಕಲ್ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಟ್ಟೆಮನೆ ವೃತ್ತದಲ್ಲಿರುವ ಸರ್ಕಾರಿ ಜಮೀನನ್ನು ವಶಕ್ಕೆ ಪಡೆದು ಮನೆ ನಿರ್ಮಿಸಿಕೊಂಡಿರುವ ಅರ್ಹ ಬಡವರಿಗೆ ಹಕ್ಕುಪತ್ರ ಹಾಗೂ ನಿವೇಶನ ರಹಿತರಿಗೆ ನಿವೇಶನ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕಲ್ಕೆರೆಯಿಂದ ಚನ್ನರಾಯಪಟ್ಟಣ ತಹಶೀಲ್ದಾರ್ ಕಚೇರಿ ವರೆಗೆ ಪಾದಯಾತ್ರೆ ನಡೆಸಲಾಯಿತು.

ಕಟ್ಟೆಮನೆ ವೃತ್ತದಲ್ಲಿರುವ ಸರ್ಕಾರಿ ಜಮೀನು ಅತಿಕ್ರಮಣಕ್ಕೆ ಒಳಗಾಗುವ ಸಾಧ್ಯತೆಯಿದ್ದು, ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆತಿಲ್ಲ. ಸರ್ಕಾರಿ ಭೂಮಿ ಕೆಲವರ ಪಾಲಾಗದೆ, ಬಡವರು ಹಾಗೂ ಸಾರ್ವಜನಿಕರ ಅಗತ್ಯಗಳಿಗೆ ಬಳಸಬೇಕು ಎಂದು ಆಗ್ರಹಿಸಿದರು.



ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್. ಹರೀಶ್ ಮಾತನಾಡಿ, ಕಲ್ಕೆರೆ ಗ್ರಾಮದ ಸರ್ವೆ ನಂ.156/1ರಲ್ಲಿ 9.06 ಎಕರೆ ಸರ್ಕಾರಿ ಜಮೀನು ಇರುವುದಾಗಿ ಪಹಣಿಯಲ್ಲಿ ದಾಖಲಾಗಿದ್ದು, ಕಂದಾಯ ಇಲಾಖೆಯಿಂದ ಅಳತೆ ಕಾರ್ಯವೂ ನಡೆದಿದೆ ಎಂದು ತಿಳಿಸಿದರು.

ಈ ಜಾಗದಲ್ಲಿ ಸಾರ್ವಜನಿಕ ಗ್ರಂಥಾಲಯಕ್ಕೆ 10 ಗುಂಟೆ, ಆಟದ ಮೈದಾನಕ್ಕೆ 3 ಎಕರೆ ಹಾಗೂ ಸಮುದಾಯ ಭವನ ಸೇರಿದಂತೆ ಸಾರ್ವಜನಿಕ ಉದ್ದೇಶಗಳಿಗೆ 2 ಎಕರೆ ಮೀಸಲಿಡುವಂತೆ ಗ್ರಾಮ ಪಂಚಾಯಿತಿ ಮನವಿ ಸಲ್ಲಿಸಿದೆ.

ಪಿಎಸಿಸಿ ಬ್ಯಾಂಕ್ ಹಾಗೂ ಡೇರಿ ಇರುವ ಹಿನ್ನೆಲೆಯಲ್ಲಿ ಅಗತ್ಯ ಕಟ್ಟಡಗಳಿಗೆ ಜಾಗ ಮೀಸಲಿಟ್ಟು, ಉಳಿದ ಜಾಗವನ್ನು ಆಶ್ರಯ ನಿವೇಶನಕ್ಕೆ ಬಳಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ತಹಶೀಲ್ದಾರ್ ಜಿ.ಎಸ್. ಶಂಕರಪ್ಪ, 15 ದಿನಗಳೊಳಗೆ ಸರ್ಕಾರಿ ಜಮೀನು ವಶಕ್ಕೆ ಪಡೆದು ಒತ್ತುವರಿ ತೆರವುಗೊಳಿಸುವುದಾಗಿ ಭರವಸೆ ನೀಡಿದರು. ಭೂ ರಹಿತರಿಗೆ ಹಂಚಿಕೆ, ಅರ್ಹರಿಗೆ ಹಕ್ಕುಪತ್ರ, ನಿವೇಶನ ರಹಿತರಿಗೆ ನಿವೇಶನ ಹಾಗೂ ಬಗರ್ ಹುಕುಂ ಅರ್ಜಿಗಳನ್ನೂ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವುದಾಗಿ ತಿಳಿಸಿದರು.

ಹೋರಾಟಗಾರರಾದ ಹೆಚ್.ಆರ್.ನವೀನ್ ಕುಮಾರ್, ಮಂಜುನಾಥ್, ಜೆ.ಎನ್. ಚಂದ್ರಹಾಸ, ತೇಜಸ್ ಗೌಡ, ವಾಸುದೇವ ಕಲ್ಕೆರೆ ಮತ್ತಿತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-30

1399: ಹೆನ್ರಿ ನಾಲ್ಕನೇ ಇಂಗ್ಲೆಂಡ್‌ನ ರಾಜನಾಗಿ ಘೋಷಿಸಲ್ಪಟ್ಟನು.

1882: ಅಮೆರಿಕದ ವಿಸ್ಕಾನ್ಸಿನ್‌ನ ಆಪಲ್ಟನ್‌ನಲ್ಲಿ ಥಾಮಸ್ ಎಡಿಸನ್ ಅವರ ಮೊದಲ ವಾಣಿಜ್ಯ ಜಲವಿದ್ಯುತ್ ಸ್ಥಾವರ ಕಾರ್ಯಾರಂಭ ಮಾಡಿತು.

1935: ಅಮೆರಿಕದ ಕೊಲೊರಾಡೊ ನದಿಯ ಮೇಲಿರುವ ಹೂವರ್ ಅಣೆಕಟ್ಟನ್ನು ಅಧಿಕೃತವಾಗಿ ಸಮರ್ಪಿಸಲಾಯಿತು.

1938: ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ಇಟಲಿ ನಡುವೆ ಮ್ಯೂನಿಕ್ ಒಪ್ಪಂದಕ್ಕೆ ಸಹಿ ಹಾಕಲಾಯಿತು.

1949: ಬರ್ಲಿನ್ ವಿಮಾನ ಸೇತುವೆ ಕಾರ್ಯಾಚರಣೆ ಅಂತ್ಯಗೊಂಡಿತು. ಸುಮಾರು 15 ತಿಂಗಳ ಕಾಲ ಪಶ್ಚಿಮ ಬರ್ಲಿನ್‌ಗೆ ವಿಮಾನಗಳ ಮೂಲಕ ಅಗತ್ಯ ವಸ್ತುಗಳನ್ನು ಸಾಗಿಸಲಾಗಿತ್ತು.

1954: ವಿಶ್ವದ ಮೊದಲ ಅಣುಚಾಲಿತ ಜಲಾಂತರ್ಗಾಮಿ ನೌಕೆ ಯುಎಸ್‌ಎಸ್ ನಾಟಿಲಸ್ ಸೇವೆಗೆ ಸೇರ್ಪಡೆಯಾಯಿತು.

1960: ಜನಪ್ರಿಯ ಅನಿಮೇಷನ್ ಸರಣಿ ದಿ ಫ್ಲಿಂಟ್‌ಸ್ಟೋನ್ಸ್ ಮೊದಲ ಬಾರಿಗೆ ದೂರದರ್ಶನದಲ್ಲಿ ಪ್ರಸಾರವಾಯಿತು.

1966: ಬೋಟ್ಸ್ವಾನಾ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡಿತು.

### ಜನನ

1207: ಪ್ರಸಿದ್ಧ ಪರ್ಷಿಯನ್ ಸೂಫಿ ಕವಿ ಜಲಾಲುದ್ದೀನ್ ರೂಮಿ

1924: ಅಮೆರಿಕದ ಖ್ಯಾತ ಸಾಹಿತಿ ಟ್ರೂಮನ್ ಕಪೋಟೆ ಜನಿಸಿದರು.

1928: ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಹಾಗೂ ಹೋಲೋಕಾಸ್ಟ್ ಬದುಕುಳಿದ ಎಲಿ ವೀಸೆಲ್

1957: ನಟಿ ಫ್ರಾನ್ ಡ್ರೆಶರ್

### ನಿಧನ

1955: ಖ್ಯಾತ ಅಮೆರಿಕನ್ ನಟ ಜೇಮ್ಸ್ ಡೀನ್

1985: ಭೂಕಂಪಶಾಸ್ತ್ರಜ್ಞ ಚಾರ್ಲ್ಸ್ ಫ್ರಾನ್ಸಿಸ್ ರಿಕ್ಟರ್

1985: ಫ್ರೆಂಚ್ ನಟಿ ಸಿಮೋನ್ ಸಿಗ್ನೊರೆ

# ಸ್ಕೂಲಿಗೇ ಇಟ್ಟ ಉಲ್ಲನ್ ಬಾಂಬು!!!-4

**- ಧನಂಜಯ ಜೀವಾಳ**

ಯಾರದೋ ಮನೆಯಿಂದ ಸೈಕಲ್ಲಿಗೆ ಗಾಳಿ ಹೊಡೆಯುವ ಪಂಪು ತಂದ ಜೀಪು ಡ್ರೈವರು, ಜೀಪಿನ ಚಕ್ರಗಳಿಗೆ ಗಾಳಿ ತುಂಬಿಸಲು ಅನುವಾದ.

''ಅಲ್ಲ ಯಜಮಾನ್ರೆ, ನಿಮ್ಮೂರಿಗೆ ಬರಬೇಕಂದ್ರೆ ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಹಾಗೆ ಆಗುತ್ತಲ. ನಮ್ಮ ಬ್ಯಾಂಕಿಂದ ಏರ್ ಡಿಸ್ಟೆಂಸ್ ಕೇವಲ ಹತ್ತು ಕಿಲೋಮೀಟರು. ಕೇವಲ ಒಂದು ಫರ್ಲಾಂಗ್ ಅಗಲದ ಹೊಳೆ ಈ ಎರಡೂ ಭಾಗದ ನಡುವಿನ ಓಡಾಟವನ್ನು ಕನಿಷ್ಠ ಮೂವತ್ತು ಕಿಲೋಮೀಟರ್‌ಗೆ ವಿಸ್ತರಿಸಿದೆ. ಈ ಎರಡೂ ಭಾಗದ ಜನರ ಕೌಟುಂಬಿಕ, ವ್ಯಾವಹಾರಿಕ, ಸಾಮಾಜಿಕ ಹಾಗೂ ಕೃಷಿ ಬದುಕಿನ ಸಂಬಂಧಗಳಿಗೆ ಶತಮಾನಗಳ ಇತಿಹಾಸವಿದೆ. ಕೇವಲ ಒಂದು ಸೇತುವೆ ಇಲ್ಲದಿರೋದು ಬೆಲೆಕಟ್ಟಲಾಗದಷ್ಟು ಮೌಲ್ಯದ ಇಂಧನ, ಸಮಯ, ಶ್ರಮ ಪೋಲಾಗಲಿಕ್ಕೆ ಕಾರಣ.

ಈ ಭಾಗದ ಪ್ರಜ್ಞಾವಂತರು ನೇರವಾಗಿ ಸರ್ಕಾರಕ್ಕೆ ಪತ್ರ ಬರೆದು, ತೀರಾ ಅಗತ್ಯವಿರುವ ಈ ಸಂಪರ್ಕ ಸೇತುವೆಯನ್ನು ರೂಪಿಸಿಕೊಂಡರೆ, ಬದುಕು ಸರಳ ಹಾಗೂ ಸುಂದರವಾಗಲಿದೆ. ಅಲ್ಲದೇ ಆ ಭಾಗದ ಜನರ ಜೀವನ ಮಟ್ಟ ಇನ್ನೂ ಸುಧಾರಿಸಲಿದೆ. ಇಷ್ಟು ವರ್ಷವಾದರೂ ಅಂತಹ ಒಂದು ಸೇತುವೆ ಇಲ್ಲಿ ಆಗದಿರುವುದು ಆಶ್ಚರ್ಯ ಅನ್ಸುತ್ತೆ'' ಎಂದರು ಫೀಲ್ಡಾಫೀಸರು.

''ಹೂ, ಸಾ. ನಮ್ಮೂರಗೂ ಇದಾರೆ ಕಂತ್ರಾಟು ಮಾಡೋರು. ಅವ್ರು ಈ ಬಾಕ್ಸ್ ಚರಂಡಿ, ಮೋರಿ, ರಸ್ತೆ ಗುಂಡಿ ಮುಚ್ಚಾದು ಇಷ್ಟೇಯ. ನಾವ್ ಇಸ್ಕೂಲಿಗೆ ಹೋಗೋವಾಗ್ಲೂ ಈ ಸೇತ್ವೆಯ ಯಾರದ್ರೂ ಮಾಡುಸ್ತಾರಾ ಅಂತ ಕಾಯ್ಕಂಡಿದ್ವು, ನಾವು ಈಗ ವಯಸ್ಸಾಗಿ ಸಾಯಕ್ಕಾಗೀವಿ, ಈಗ್ಲೂ ಕಾಯ್ತಾನೇ ಇದೀವಿ''.

ಡಾರ್ಮಾಚೀ ಘಾಟಿಯಲ್ಲಿ ರಸ್ತೆ ಅಗಲೀಕರಣ ನಡೆಯುವಾಗ ನೋಡಲು ಹೋಗಿ ಭೂ ಕುಸಿತದಲ್ಲಿ ಸಿಕ್ಕಿ ಹಾಕಿಕೊಂಡದ್ದು ದಿವಾಕರನಿಗೆ ನೆನಪಾಯ್ತು. ದಿವಾಕರ ಬೀಎಸ್ಸೀವರೆಗೆ ಓದಿಕೊಂಡು ತನ್ನ ಪಿತ್ರಾರ್ಜಿತ ಎಂಟೆಕರೆ ಗದ್ದೆ ತೋಟ ನೋಡಿಕೊಳ್ಳುತ್ತಾ ಪತ್ರಿಕೆಗಳಿಗೆ ಸಣ್ಣಪುಟ್ಟ ಕಥೆ-ಕವನ ಬರೆಯುವ ಹವ್ಯಾಸ ಉಳ್ಳವನು.

'ಇವ್ನು ಯಪ್ಪತ್ ಓಟೂ ತಗಣಕ್ಲ ಮಾರಾಯ' ಅಂದಿದ್ದ ಸಂತಮ್ಮಣ್ಣನಿಗೆ ಸುರೇಶ ತರಾಟೆಗೆ ತಗಂಡ; ''ನಾನೂರ್ತೊಂಬತ್ತೋಟು ತಗಂಡೀನಿ, ನೀ ನೂರೈವತ್ತೋಟ್ ತಗಂಡ್ ತೋರ್ಸು ಮಾರಾಯ ನೋಡನ. ನಿನ್ ಜೀವನ್ದಾಗೆ ಒಂದಾದ್ರು ಎಲಕ್ಷನ್ ಫೇಸ್ ಮಾಡೀಯ?''.

ಸಂತಮ್ಮಣ್ಣನ ಮುಖ ಬೆಳ್ಳಗೆ ಬಿಳಿಚಿಕೊಳ್ಳಲಾರಂಭಿಸಿತು. ಈವರೆವಿಗೂ ಪುಟಗೋಸಿ ಪುಡಾರಿಕೆ ಮಾಡಿಕೊಂಡು,



ಊರೆಲ್ಲದರ ಯಜಮಾನ್ಕೆ ಮಾಡುತ್ತಾ ತನ್ನ ಹಾಗೂ ತನ್ನ ಹಿಂಬಾಲಕರ ಹಿತವನ್ನು ಮಾತ್ರ ಕಾಪಾಡಿಕೊಳ್ಳುತ್ತಾ, ತಾನೊಬ್ಬ ಜನನಾಯಕನಂತೆ ಪೋಸು ಕೊಡುತ್ತಿದ್ದ ಸಂತಮ್ಮಣ್ಣನಿಗೆ ತನ್ನ ಮಗನ ವಯಸ್ಸಿನವನೂ ಅಲ್ಲದ ಸುರೇಶ ಊರೆಲ್ಲ ಸಮಸ್ತರ ಮುಂದೆ ಸವಾಲೆಸೆದದ್ದು ನುಂಗಲಾರದ ತುತ್ತಾಗಿತ್ತು. ನೇರಾನೇರ ಹಣಾಹಣಿಯ ಪಂಚಾಯ್ತಿ ಎಲೆಕ್ಷನ್ನಿನಲ್ಲಿ ಸಹ ಸ್ಪರ್ಧೆಗಿಳಿದು ತನ್ನ ನಿಜವಾದ ಸಾಮರ್ಥ್ಯವನ್ನು ಪರೀಕ್ಷೆಗೊಡ್ಡಲೂ ಸಹ ಅಳುಕುತ್ತಿದ್ದ ಸಂತಮ್ಮಣ್ಣ ಊರಿನಲ್ಲಿ ಬದಲಾಗುತಿದ್ದ ಸನ್ನಿವೇಶಗಳನ್ನು ತನ್ನ ನಿಯಂತ್ರಣಕ್ಕೆ ಹೇಗೆ ತೆಗೆದುಕೊಳ್ಳುವುದೆಂಬ ಸಂದಿಗ್ಧಕ್ಕೆ ಬಿದ್ದ.

ಹೇಗಾದರೂ ಮಾಡಿ ಈ ಬಾರಿಯ ಜಿಲ್ಲಾ ಪಂಚಾಯ್ತಿ ಚುನಾವಣೆಯ ಮೂಲಕ ಜಿಲ್ಲಾ ರಾಜಕಾರಣಕ್ಕೆ ಎಂಟ್ರಿ ಕೊಡಲು ಪ್ಲಾನು ಮಾಡುತಿದ್ದ ಸಂತಮ್ಮಣ್ಣನಿಗೆ ಜನಾನುರಾಗಿ ದಿವಾಕರನೇ ಪ್ರತಿಸ್ಪರ್ಧಿಯಾಗುವ ಸಾಧ್ಯತೆಯಿತ್ತು. ವರಸೆಯಲ್ಲಿ ಮಾವನ ಮಗನೇ ಆಗಬೇಕಿದ್ದ ದಿವಾಕರನಿಗೂ ಸಂತಮ್ಮಣ್ಣನಿಗೂ ಸಾರ್ವಜನಿಕ ಬದುಕಿನ ಹಿನ್ನೆಲೆಯಲ್ಲಿ ಅಗಾಧವಾದ ಅಂತರವಿತ್ತು.

ದಿವಾಕರನಿಗೆ ಗೊತ್ತಿತ್ತು, ಹಣ್ಣಿರುವ ಮರಕ್ಕೇ ತಾನೇ ಜನಾ ಕಲ್ಲೊಡೆಯುವುದು ಎಂದು. ನಿಮ್ಮನ್ನು ಯಾರಾದ್ರೂ ಟೀಕಿಸುತಿದ್ದಾರೆ, ನಿಮ್ಮ ಕುರಿತು ತಮ್ಮ ಶ್ರಮ ವ್ಯಯಿಸುತಿದ್ದಾರೆ ಎಂದರೆ ನೀವು ಅವರಿಗಿಂತ ಮುಂದಿದ್ದೀರಿ ಎಂದೇ ಅರ್ಥ. ಅಂದಮಾತ್ರಕ್ಕೆ ಅದು ಅಹಂಕಾರಕ್ಕೆ ಕಾರಣವಾಗಬಾರದು, ಆತ್ಮವಿಶ್ವಾಸ ವೃದ್ಧಿಸಬೇಕಷ್ಟೇ. ಯಾರ ಮೇಲೆ ವಿಶ್ವಾಸವಿಟ್ಟಿರುತ್ತೇವೆಯೋ ಅವರಿಂದಲೇ ದ್ರೋಹಕ್ಕೊಳಗಾದೆವು ಎಂದು ನಾವು ಹತಾಶರಾಗಬೇಕಿಲ್ಲ..... ಕಡೆಗೆ ಇತಿಹಾಸದಲ್ಲಿ ಉಳಿಯುವವರು ಪ್ರಾಮಾಣಿಕರೇ ಹೊರತು ಮೋಸಗಾರರಲ್ಲ.

''ರಸ್ತೆಗಳನ್ನು ಇನ್ನೂ ಅಗಲ ಅಗಲ ಅಗಲ ಮಾಡ್ತಿದ್ದಾರಲ, ಇಷ್ಟೊಂದು ರಸ್ತೆಗಳು ನಮಗೆ ಬೇಕಾ? ಅನ್ನ ಬೆಳೆಯುವ ಭೂಮಿ, ಬಾಳಿ ಬದುಕುವ ಮನೆ, ಪ್ರಾಣವಾಯು ಮರ, ದೇಹದ ಚರ್ಮದಂತಿರುವ ಮೇಲ್ಮಣ್ಣು, ಜೀವಾಧಾರವಾಗಿರುವ ಜಲಮೂಲಗಳನ್ನು ನುಂಗಿ ನೀರು ಕುಡಿಯುತ್ತಿರುವ ಖಜಾನೆ ಖಾಲಿ ಮಾಡುವ ಈ ಯೋಜನೆಗಳಿಂದ ಇಡೀ ಭೂಮಿಯ ಸ್ವರೂಪವೇ ಬದಲಾಗುತ್ತಿದೆ. ಖಂಡಿತಾ ಇವು ನಮ್ಮ ಕೊನೆಯ ದಿನಗಳು. ನಮ್ಮನ್ನು ನಾವೇ ನಿಯಂತ್ರಿಸಿಕೊಳ್ಳದಿದ್ದರೆ ನಮ್ಮನ್ನು ನಮ್ಮ ಮಕ್ಕಳು ಕ್ಷಮಿಸಲಾರರು.

ನಿನ್ನ ಮೇಲೆ ಇಲ್ಲಸಲ್ಲದ ಆಪಾದನೆ ಮಾಡುತ್ತಾ, ನಿನ್ನ ಹಾದಿಯಲಿ ಹೆಜ್ಜೆಹೆಜ್ಜೆಗೂ ಅಡ್ಡಿ ಮಾಡುತ್ತಾ ಇರೋ ಸಂತಮ್ಮಣ್ಣನ್ನ ಇನ್ನೂ ಸಹಿಸಿಕೊಳ್ತಿರೋ ನೀನು ಗ್ರೇಟು ಬಿಡು ಮಾರಾಯ'' ಎಂದು ಫಯಾಝ್ ಹೇಳಿದ್ದಕ್ಕೆ, ದಿವಾಕರ, ''ಒಳ್ಳೆಯತನ ಒಂದು ಸೋಗಾಗಿದ್ದಲ್ಲಿ ಅದು ಸಂದರ್ಭದ ಕಾವಿನಲ್ಲಿ ಆವಿಯಾಗುತ್ತದೆ. ಒಬ್ಬ ನಮ್ಮ ಕಿರುಕುಳಗಳಿಗೆ ಸರಿಸಮನಾಗಿ ಪ್ರತಿಕ್ರಿಯಿಸುತ್ತಿಲ್ಲ ಎಂದರೆ ಅವನಿಗೆ ತಿರುಗೇಟು ನೀಡಲು ಸಾಮರ್ಥ್ಯವಿಲ್ಲವೆಂದರ್ಥವಲ್ಲ. ಬದಲಿಗೆ ಒಂದೋ ನಮ್ಮ ಮೇಲೆ ಕೊನೆಮೊದಲಿಲ್ಲದ ವಿಶ್ವಾಸ, ವಾತ್ಸಲ್ಯವಿರಬಹುದು. ಇರಬಹುದಾದ ಗೆಳೆತನವ ಕಳೆದುಕೊಳ್ಳಬಾರದೆಂಬ ಅಭಿಲಾಷೆಯಿರಬಹುದು, ನಮ್ಮ ಜುಜುಬಿ ಬುದ್ಧಿಯ ಬಗ್ಗೆ ತಿರಸ್ಕಾರವಿರಬಹುದು, ಅವನಿಗೆ ನಮ್ಮ ನೀಚತನದ ಬಗ್ಗೆ ಕನಿಕರವಿರಬಹುದು, ಇಲ್ಲವೇ ನಮ್ಮ ಸಣ್ಣತನವನ್ನು ಕಂಡು ಅವ ಅಸಹ್ಯಪಟ್ಟಿರಬಹುದು. ಆತ್ಮವಿಮರ್ಶೆ ಮಾಡಿಕೊಳ್ಳದವನು ಇದ್ದರೂ ಸತ್ತಂತೆ. ಅಲ್ವ ಫಯಾಝ್?''

''ತಾನೇನಲ್ಲವೋ ಅದೇ ತಾನೆಂದು ತೋರ್ಪಡಿಸಿಕೊಳ್ಳಲು ಹಾತೊರೆಯುವ ಜೀವಗಳ ನಡುವೆ; ನೀವು ಒಪ್ಪುವಿರೋ ಬಿಡುವಿರೋ, ನನಗದರ ಗೊಡವೆಯಿಲ್ಲ; ನಾನಿರೋದೇ ಹೀಗೆ ಎಂದು ನಿಷ್ಠುರವಾಗಿ ನಿಲ್ಲುವವ ಒಂಟಿಯಾಗಿ ಹೋಗುವ ಸಂದರ್ಭಗಳೇ ಹೆಚ್ಚು. ಒಬ್ಬನಿಗೆ ಸರಿ ಕಂಡದ್ದು ಮತ್ತೊಬ್ಬನಿಗೆ ಸರಿಯಾಗಿ ಕಾಣಬೇಕಿಲ್ಲ. ಕಂಡದ್ದನ್ನು ವಿಮರ್ಶಿಸುವ, ಕಲ್ಪನೆಗಳನ್ನು ಚಿತ್ರಿಸುತ್ತಾ, ಕಾಣದ್ದಕ್ಕೆ ಹಂಬಲಿಸುವುದೇ ಬಹುತೇಕ ಸೃಜನಶೀಲ ಕ್ರಿಯೆಗಳ ಗಮ್ಯ. ಬರಹಗಾರನ ವ್ಯಕ್ತಿತ್ವಕ್ಕೂ ಆತನ ಬರಹಕ್ಕೂ ತಳುಕು ಹಾಕಿ ನೋಡುವುದು ಸಿನಿಕತನವಷ್ಟೇ. ಆದರ್ಶಗಳನ್ನಿಟ್ಟುಕೊಂಡು ಬರೆಯುವವರು ಆದರ್ಶಪ್ರಾಯರಾಗಿರಲೇಬೇಕಿಲ್ಲ. ಮಾನವಸಹಜ ದೌರ್ಬಲ್ಯಗಳು, ಸನ್ನಿವೇಶಗಳು ಬರಹಗಾರ ತನ್ನೆಲ್ಲಾ ಬರವಣಿಗೆಯ ಆಶಯಗಳನ್ನು ಮೀರಿ ವಾಸ್ತವದಲ್ಲಿ ಬದುಕಲು ಅಣಿಗೊಳಿಸುತ್ತವೆ. ಏನೇ ಹೇಳು ದಿವಾಕರಾ, ಗಿಡ್ಡಪ್ಪನಂಥಾ ಪಟೇಲನಿಗೆ ಅನಧಿಕೃತ ಮಗನಾಗಿ ಹುಟ್ಟಿರೋ ಈ ಸಂತಮ್ಮಣ್ಣ ಕ್ರಾಸ್ ಬ್ರೀಡಿನಂತೆ ಭಲೇ ಪಾಕಡಾ!''ಎಂದು ಫಯಾಝ್ ಗಹಗಹಿಸಿ ನಕ್ಕ.

ಗೆಳೆಯ ಫಯಾಝನೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತಿದ್ದ ದಿವಾಕರ, ''ಈ ಸಮಾಜವನ್ನು ಇಬ್ಬರು ಹಾಳುಗೆಡವಬಲ್ಲರು. ಒಬ್ಬರು ಎಲ್ಲಾ ಗೊತ್ತಿದ್ದೂ ಮಾತನಾಡಲಾರದವರು. ಇನ್ನೊಬ್ಬರು ಏನೂ ಗೊತ್ತಿಲ್ಲದೆಯೂ ಮಾತನಾಡುವವರು. ಮಾತು ಆಡಿದರೆ ಹೋಯ್ತು. ಮುತ್ತು ಒಡೆದರೆ ಹೋಯ್ತು, ಫಯಾಝ್. ಮಾತು ಆಡಿದರೆ ಹೋಯ್ತು. ಮುತ್ತು ಒಡೆದರೆ ಹೋಯ್ತು.............................. .. ಓಟು ಕೊಟ್ಟರೆ ಹೋಯ್ತು!!!!! ಸಂದರ್ಭದಕಾವಿನಲ್ಲಿ ಆವಿಯಾಗುವ ಆ ಒಳ್ಳೆಯತನವೆಂಬ ಮುಖವಾಡ; ನುಡಿಯದೆಯೂ ಬಯಲಾಗುವ ನಮ್ಮ ಆತ್ಮರತಿಯೆಂಬ ಅಂತಿಮ ಸತ್ಯವನ್ನು ತೆರೆದಿಡುತ್ತದೆ. ನಮ್ಮ ಪ್ರತಿಕ್ರಿಯೆ ಹೇಗಿರಬೇಕೆಂದರೆ, ನಮ್ಮನ್ನು ಅನುಮಾನಿಸಿದ, ಅಪಮಾನಿಸಿದ, ಹಂಗಿಸಿದ, ನಿರ್ಲಕ್ಷಿಸಿದ, ತಿರಸ್ಕರಿಸಿದ, ಟೀಕಿಸಿದ, ಅಪಹಾಸ್ಯ ಮಾಡಿದ, ಮೆಟ್ಟಿದ, ಹಿಂತಳ್ಳಿದವರು ಏಕಾಂತದಲ್ಲಿ ಕುಳಿತಾಗ ಅವರ ಆ ಕೃತ್ಯದ ಬಗೆಗೆ ಅವರಿಗೇ ನಾಚಿಕೆಯಾಗಬೇಕು. ನಗೆ ಹೋಗಿ ಹಗೆಯಾಗಲು ಹೆಚ್ಚು ಸಮಯ ಬೇಕಿಲ್ಲ!!! ಹಾಗೆಯೇ ಹಗೆ ಸರಿದು ನಗೆ ಮೂಡಲು ಹೆಚ್ಚು ಶ್ರಮವೂ ಬೇಕಿಲ್ಲ.

ವಕ್ಕಲಿಗರ, ಲಿಂಗಾಯಿತರ, ದಲಿತರ, ಕುರುಬರ, ಮುಸ್ಲಿಮರ, ಕ್ರೈಸ್ತರ, ಬ್ರಾಹ್ಮಣರ, ಶೆಟ್ಟರ, ಕ್ಷೌರಿಕರ, ಮೆಟ್ಟು ಹೊಲಿಯುವವರ, ಮೀನ್ಹಿಡಿದು ಮಾರುವವರ ಸಂಘ ಹೀಗೇ ಯಾವುದೇ ಇರಲಿ; ಇವು ಸಮಾಜಕ್ಕಂಟಿದ ಶಾಪವಾದ ಜಾತಿ ವ್ಯವಸ್ಥೆಯನ್ನು ಪೋಷಿಸುವ ಹಾಗೂ ಅದರ ಮೂಲಕ ಸಮಾಜದಲ್ಲಿ ಮಾನವೀಯ ಸಂಬಂಧಗಳನ್ನು ಸಡಿಲಗೊಳಿಸುವ ಪ್ರಕ್ರಿಯೆಯನ್ನು ಬಲಗೊಳಿಸುವ ಸಾಧನಗಳು, ಹಾಗಾಗಿ ನಾನು ಯಾವುದೇ ಜಾತಿಸೂಚಕ ಸಂಸ್ಥೆಗಳಿಗೆ ಸದಸ್ಯನಾಗುವುದೇ ಇಲ'' ಎಂದು ಖಡಕ್ಕಾಗಿ ಹೇಳಿದ ದಿವಾಕರ ತೋಟದ ಕೆಲಸಗಾರರಿಗೆ ವಾರದ ಸಂಬಳ ಬಟವಾಡೆ ಮಾಡಲೆಂದು ಗೆಳೆಯ ಫಯಾಝ್‌ಗೆ ಮೂರು ಸಾವಿರ ರೂಪಾಯಿಯನ್ನು ಸಾಲವಾಗಿ ಕೊಟ್ಟು ಕುಳಿತಲ್ಲಿಂದ ಮೇಲೆದ್ದ. (ಮುಂದುವರೆಯುತ್ತದೆ)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248